# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ ಮೈಸೂರು

ಸಂಖ್ಯೆ: ಸಿ8/1953/ಶಾ ಮಾ ನವೀ, 53/2017-18 ದಿನಾಂಕ: 20/07/2018

## ಜ್ಞಾಪನ

ವಿಷಯ ; **ಸುವರ್ಣ ಕರ್ನಾಟಕ ನವೋದಿತ ಮಕ್ಕಳ ಶಾಲೆ, ಪೋಲೀಸ್ ವಸತಿ ಗೃಹ ಹಿಂಭಾಗ,ಜಲಪುರಿ, ಮೈಸೂರು ಈ ಶಾಲೆಗೆ ಪ್ರಥಮ ಮಾನ್ಯತೆ ಮತ್ತು ಮಾನ್ಯತೆ ನವೀಕರಣ ನೀಡುವ ಬಗ್ಗೆ**

ಉಲ್ಲೇಖ:1 ಕರ್ನಾಟಕ ಶಿಕ್ಷಣ ಕಾಯಿದೆ ನಿಯಮಗಳು 1999(4)

2.ಸರ್ಕಾರಿ ಸುತ್ತೋಲೆ ಸಂಖ್ಯೆ ಇಡಿ 44 /ಎಸ್ ಎಲ್ ಬಿ 2007 ಬೆಂಗಳೂರು ದಿನಾಂಕ: 3-9-2007

3.ಸರ್ಕಾರಿ ಸುತ್ತೋಲೆ ಸಂಖ್ಯೆ ಇಡಿ 359. ಪಿಜಿಸಿ 2015 ದಿ:05-09-2015

4.ಕ್ಷೇತ್ರ ಶಿಕ್ಷಣಾಧಿಕಾರಿಗಳ ಸ್ಥಳ ಪರಿಶೀಲನ ಭೇಟಿ ದಿನಾಂಕ:24/02/2018

*****

**ಸುವರ್ಣ ಕರ್ನಾಟಕ ನವೋದಿತ ಮಕ್ಕಳ ಶಾಲೆ, ಪೋಲೀಸ್ ವಸತಿ ಗೃಹ ಹಿಂಭಾಗ,ಜಲಪುರಿ, ಮೈಸೂರು, ಶಾಲೆಗೆ ಈ ಕಛೇರಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಭೇಟಿ/ಶಿಕ್ಷಣ ಸಂಯೋಜಕರ ಶಿಫಾರಸ್ಸಿನ ಮೇರೆಗೆ** ಈಗಿನ ಹಾಗೂ ಆಗ್ಗಿಂದಾಗೆ ಸೇರ್ಪಡೆಗೊಳ್ಳುವ ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮ-ನಿಬಂಧನೆ ಮೇರೆಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ತಾತ್ಕಾಲಿಕವಾಗಿ ಮತ್ತು ಅನುದಾನ ರಹಿತವಾಗಿ ಮಾನ್ಯತೆ ನವೀಕರಣ ನೀಡಿದೆ.

| ತರಗತಿ | ವಿಭಾಗ | ಮಾಧ್ಯಮ | ಮಾನ್ಯತೆ ನವೀಕರಣದ ಅವಧಿ |
|---|---|---|---|
| 1 ನೇ ತರಗತಿ | ತಲಾ ಒಂದು ವಿಭಾಗ | ಕನ್ನಡ ಮಾಧ್ಯಮ | 2006-07 ನೇ ಸಾಲಿಗೆ 1 ನೇ ತರಗತಿಗೆ ಶಾಶ್ವತ ಅನುದಾನ ರಹಿತವಾಗಿ ಪ್ರಥಮ ಮಾನ್ಯತೆ ನೀಡಿದೆ |
| 1 ರಿಂದ 2ನೇ ತರಗತಿ | ತಲಾ ಒಂದು ವಿಭಾಗ | ಕನ್ನಡ ಮಾಧ್ಯಮ | 2007-08 ನೇ ಸಾಲಿಗೆ 2ನೇ ತರಗತಿಗೆ ಶಾಶ್ವತ ಅನುದಾನ ರಹಿತವಾಗಿ ಪ್ರಥಮ ಮಾನ್ಯತೆ ನೀಡಿ 1 ನೇತರಗತಿಗೆ ಮಾನ್ಯತೆ ನವೀಕರಿಸಿದೆ. |
| 1 ರಿಂದ 3ನೇ ತರಗತಿ | ತಲಾ ಒಂದು ವಿಭಾಗ | ಕನ್ನಡ ಮಾಧ್ಯಮ | 2008-09 ನೇ ಸಾಲಿಗೆ 3ನೇ ತರಗತಿಗೆ ಶಾಶ್ವತ ಅನುದಾನ ರಹಿತವಾಗಿ ಪ್ರಥಮ ಮಾನ್ಯತೆ ನೀಡಿ 2ನೇತರಗತಿಗೆ ಮಾನ್ಯತೆ ನವೀಕರಿಸಿದೆ. |
| 1 ರಿಂದ 4ನೇ ತರಗತಿ | ತಲಾ ಒಂದು ವಿಭಾಗ | ಕನ್ನಡ ಮಾಧ್ಯಮ | 2009-10 ನೇ ಸಾಲಿಗೆ 4ನೇ ತರಗತಿಗೆ ಶಾಶ್ವತ ಅನುದಾನ ರಹಿತವಾಗಿ ಪ್ರಥಮ ಮಾನ್ಯತೆ ನೀಡಿ 3ನೇಥರಗತಿಗೆ ಮಾನ್ಯತೆ ನವೀಕರಿಸಿದೆ. |
| 1 ರಿಂದ 5ನೇ ತರಗತಿ | ತಲಾ ಒಂದು ವಿಭಾಗ | ಕನ್ನಡ ಮಾಧ್ಯಮ | 2010-11 ನೇ ಸಾಲಿಗೆ 5ನೇ ತರಗತಿಗೆ ಶಾಶ್ವತ ಅನುದಾನ ರಹಿತವಾಗಿ ಪ್ರಥಮ ಮಾನ್ಯತೆ ನೀಡಿ 4ನೇತರಗತಿಗೆ ಮಾನ್ಯತೆ ನವೀಕರಿಸಿದೆ. |
| 1 ರಿಂದ 5ನೇ ತರಗತಿ | ತಲಾ ಒಂದು ವಿಭಾಗ | ಕನ್ನಡ ಮಾಧ್ಯಮ | 2011-12 ನೇ ಸಾಲಿನಿಂದ 2018-19 ನೇ ಸಾಲಿನ ವರೆಗೆ ಶಾಶ್ವತ ಅನುದಾನ ರಹಿತವಾಗಿ & ತಾತ್ಕಾಲಿಕವಾಗಿ ಮಾನ್ಯತೆ ನವೀಕರಿಸಿದೆ. |

**ಷರತ್ತುಗಳು:-**

| | |
|---|---|
| 1 | ಅನುದಾನ ಸಂಹಿತೆಯ ಎಲ್ಲಾ ನಿಯಮಗಳನ್ನ ಕಡ್ಡಾಯವಾಗಿ ಪಾಲಿಸಬೇಕು |
| 2 | ಮಕ್ಕಳ ದಾಖಲಾತಿ ಮತ್ತು ಹಾಜರಾತಿಯನ್ನು ಉತ್ತಮಪಡಿಸಬೇಕು |
| 3 | ಸ್ಥಳಾವಕಾಶವನ್ನು ಹೆಚ್ಚಿಸಿ ಸ್ವಂತ ಕಟ್ಟಡವನ್ನು ಹೊಂದಿರತಕ್ಕದ್ದು ಮತ್ತು ಮೂಲಭೂತ ಸೌಲಭ್ಯಗಳಾದ ಆಟದ ಮೈದಾನ, ಕುಡಿಯುವ ನೀರು, ಶೌಚಾಲಯ ಇನ್ನಿತರೆ ವ್ಯವಸ್ಥೆಗಳನ್ನು ಕಡ್ಡಾಯವಾಗಿ ಪೂರೈಸಿರಬೇಕು |
| 4 | ಅಗತ್ಯಕ್ಕೆ ಅನುಗುಣವಾಗಿ ಪೀಠೋಪಕರಣ, ಪಾಠೋಪಕರಣಗಳನ್ನು ಹೊಂದಿರಬೇಕು |
| 5 | ನಿಗಧಿತ ವಿದ್ಯಾರ್ಹತೆ ಹಾಗೂ ವಯೋಮಿತಿ ಹೊಂದಿರುವ ಶಿಕ್ಷಕರನ್ನು ವಿದ್ಯಾರ್ಥಿಗ ಸಂಖ್ಯೆಗೆ ಅನುಗುಣವಾಗಿ ನೇಮಕ ಮಾಡಿಕೊಂಡು ರೋಷ್ಟರ್ ಪದ್ಧತಿಯನ್ನು ಪಾಲಿಸಬೇಕು |
| 6 | ಸರ್ಕಾರ ನಿಗಧಿ ಪಡಿಸಿರುವ ಪಠ್ಯ ಕ್ರಮದಲ್ಲಿ ಬೋಧಿಸಬೇಕು |
| 7 | ಅನುದಾನ ಸಂಹಿತೆ ನಿಯಮ 15(1) ರ ಪ್ರಕಾರ ಸ್ಥಿರನಿಧಿ ಠೇವಣಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂಸಂಸ್ಥೆಯ ಕಾರ್ಯದರ್ಶಿಗಳ ಜಂಟಿ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಇಡುವುದು ಅವದಿ ಮೀರಿದ ಸ್ಥಿರನಿಧಿ ಠೇವಣಿಯನ್ನು ನವೀಕರಿಸಬೇಕು. |
| 8 | ಆರ್ ಟಿ ಇ ಕಾಯ್ದೆಯಡಿ ಮಾನ್ಯತೆಯನ್ನು ಕಡ್ಡಾಯವಾಗಿ ನವೀಕರಿಸಿಕೊಳ್ಳಬೇಕು |
| 9 | ಪೂರ್ವಾನುಮತಿ ಇಲ್ಲದೆ ಹೆಚ್ಚುವರಿ ತರಗತಿಗಳನ್ನಾಗಲಿ, ವಿಭಾಗಗಳನ್ನಾಗಲಿ ತೆರೆಯಬಾರದು |
| 10 | ಸರ್ಕಾರ ನಿಗಧಿಪಡಿಸಿರುವ ಶುಲ್ಕಗಳನ್ನು ಮಾತ್ರ ವಿದ್ಯಾರ್ಥಿಗಳಿಂದ ವಸೂಲಿ ಮಾಡುವುದು |
| 11 | ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಕನಿಷ್ಟಕ್ಕಿಂತ ಕಡಿಮೆ ಇಲ್ಲವಂತೆ ಕಾಯ್ದು ಕೊಳ್ಳಬೇಕು |
| 12 | ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸೇವಾ ಭದ್ರತೆಯನ್ನು ಒದಗಿಸಬೇಕು |
| 13 | ಶಾಲಾ ಕಟ್ಟಡವನ್ನು ಸುರಕ್ಷಿತವಾಗಿಡುವುದು ಹಾಗೂ ಸರ್ಕಾರಿ ಕಾರ್ಯಗಳಿಗೆ ಕಟ್ಟಡ ಬಿಟ್ಟುಕೊಡಬೇಕು |
| 14 | ಆರ್ ಟಿ ಇ ನೊಂದಣಿ ಮಾಡಿಸಿ ಕಾಯ್ದೆಯ ಎಲ್ಲಾ ನಿಯಮ ಪಾಲಿಸಬೇಕು |
| 15 | ಇಲಾಖಾ ಅನುಮತಿ ಇಲ್ಲದೆ ಹಾಲಿ ಸ್ಥಳದಿಂದ ಬೇರೆ ಸ್ಥಳಕ್ಕೆ ಸ್ಥಳಾಂತರಿಸಬಾರದು |

| | |
|---|---|
| 16 | ಶಾಲಾ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಅಗ್ನಿನಿರೋದಕ ಮತ್ತು ಸಿಸಿಟಿವಿ ಅಳವಡಿಸಬೇಕು |
| 17 | ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 104 ಎಸ್.ಇ.ಪಿ 2005 ದಿ; 12/01/2006 ರಂತೆ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗೆ ಕಡ್ಡಾಯವಾಗಿ ಸೇವಾ ಭದ್ರತೆಯನ್ನು ಒದಗಿಸುವ ಷರತ್ತಿಗೆ ಒಳಪಟ್ಟು ಶಾಲಾ ಮಾನ್ಯತೆಯನ್ನು ತಾತ್ಕಾಲಿಕವಾಗಿ ನವೀಕರಿಸಿದೆ |
| 18 | ದಿ;31/03/2019ರ ಒಳಗಾಗಿ ನಿಗಧಿತ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಕಡ್ಡಾಯವಾಗಿ ಹೊಂದುವುದು |
| 19 | ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ದಾಖಲೆಗಳು ಸುಳ್ಳೆಂದು ಕಂಡು ಬಂದಲ್ಲಿ ಶಾಲಾ ಮಾನ್ಯತೆಯನ್ನು ಹಿಂಪಡೆಯಲಾಗುವುದು |
| 20 | ಟಿ ಇ ಟಿ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡಿರುವ ಅರ್ಹ ಶಿಕ್ಷಕರನ್ನು ಕಡ್ಡಾಯವಾಗಿ ನೇಮಕ ಮಾಡಿಕೊಳ್ಳುವುದು |
| 21 | ಪೋಷಕರು ಮತ್ತು ಶಿಕ್ಷಕರ ಸಂಘ ಸ್ಥಾಪಿಸಿ ನಿಯಮಿತವಾಗಿ ಸಭೆಗಳನ್ನು ನಡೆಸುವುದು |

ಮೇಲ್ಕಂಡ ಎಲ್ಲಾ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಇಲ್ಲದಿದ್ದಲ್ಲಿ ಶಾಲೆಗೆ ನೀಡಿರುವ ಮಂಜೂರಾತಿ/ಮಾನ್ಯತೆಯನ್ನು ಹಿಂಪಡೆಯಲಾಗುವುದು.

ಕ್ಷೇತ್ರ ಶಿಕ್ಷಣಾಧಿಕಾರಿ
ಮೈಸೂರು ಉತ್ತರ ವಲಯ

ಗೆ,
ಕಾರ್ಯದರ್ಶಿಗಳು/ಮುಖ್ಯ ಶಿಕ್ಷಕರು
ಸುವರ್ಣ ಕರ್ನಾಟಕ ನವೋದಿತ ಮಕ್ಕಳ ಶಾಲೆ
ಪೋಲೀಸ್ ವಸತಿ ಗೃಹ ಹಿಂಭಾಗ,
ಜಲಪುರಿ, ಮೈಸೂರು,